# ಸರ್ವ ಶಿಕ್ಷಣ ಅಭಿಯಾನ

## ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು-01

ದಿನಾಂಕ: 08-06-2010

ಸಂಖ್ಯೆ: ಸ.ಶಿ.ಅ/ಹೆ.ಮ.ಶಿ/ಕೆ.ಜಿ.ಬಿ.ವಿ./ಎ.ಆ-2/2010-11

## ಜ್ಞಾಪನ

**ವಿಷಯ:** ಆಹಾರ ಪೂರೈಕೆ ಹಾಗೂ ಅರೆಕಾಲಿಕ ಸಿಬ್ಬಂದಿ ನೇಮಕಾತಿ ಕುರಿತು.

**ಉಲ್ಲೇಖ:** 1. ಈ ಕಛೇರಿ ಸುತ್ತೋಲೆ ಸಮ ಸಂಖ್ಯೆ: ಸ.ಶಿ.ಅ/ಹೆ.ಮ.ಶಿ/ಕೆ.ಜಿ.ಬಿ.ವಿ./ಎ.ಆ/2010-11 ದಿನಾಂಕ: 20-04-2010.

2. ನವೋದಯ ಎಜುಕೇಶನ್ ಟ್ರಸ್ಟ್ ಇವರ ಪತ್ರ ದಿನಾಂಕ: 29-04-2010.

*****

ಮೇಲಿನ ವಿಷಯದನ್ವಯ, ಕೆ.ಜಿ.ಬಿ.ವಿ.ಗಳಲ್ಲಿ ಆಹಾರ ಪೂರೈಕೆ ಹಾಗೂ ಅರೆಕಾಲಿಕ ಸಿಬ್ಬಂದಿ ನೇಮಕಾತಿಗಾಗಿ ದರಪಟ್ಟಿ ಆಹ್ವಾನ ಮಾಡಿ, ಏಜೆನ್ಸಿಗಳನ್ನು ಆಯ್ಕೆ ಮಾಡಿ, ಈ ಕಛೇರಿಗೆ ವರದಿ ಮಾಡಲು ಉಲ್ಲೇಖ-1 ರಂತೆ ಸೂಚಿಸಲಾಗಿತ್ತು.

ಚಿಕ್ಕಬಳ್ಳಾಪುರ ಜಿಲ್ಲೆಯ ಕೆ.ಜಿ.ಬಿ.ವಿ.ಗಳಿಗೆ ಆಹಾರ ಪೂರೈಕೆ ಹಾಗೂ ಅರೆಕಾಲಿಕ ಸಿಬ್ಬಂದಿಯ ಸೇವೆಯನ್ನು ಒದಗಿಸುತ್ತಿರುವ ನವೋದಯ ಎಜುಕೇಶನ್ ಟ್ರಸ್ಟ್ ಇವರು ದಿನಾಂಕ: 01-01-2010 ರಿಂದ 1 ವರ್ಷದವರೆಗೆ ಅಥವಾ ಮುಂದಿನ ಆದೇಶವಾಗುವವರೆಗೆ ಸೇವೆ ಒದಗಿಸಲು ಕರಾರು ಒಪ್ಪಂದ ಮಾಡಿಕೊಂಡಿದ್ದು, ಮುಂದುವರಿಸಲು ಉಲ್ಲೇಖ-2 ರಂತೆ ಕೋರಿರುತ್ತಾರೆ. ಆದರೆ ಯಾವುದೇ ಏಜೆನ್ಸಿಯನ್ನು ದರಪಟ್ಟಿಯ ಮೂಲಕ ಅಥವಾ ಟೆಂಡರ್ ಮೂಲಕ ಆಯ್ಕೆ ಮಾಡಿಕೊಂಡು, ನಿಗದಿತ ಅವದಿಯ ಸೇವೆ ನೀಡಿ, ಅವಧಿ ಮುಗಿದಿದ್ದಲ್ಲಿ, ಗುಣಮಟ್ಟ ಉತ್ತಮವಾಗಿದ್ದು, ಹಿಂದಿನ ದರಕ್ಕೆ ಸೇವೆಯನ್ನು ಒದಗಿಸಿದಲ್ಲಿ ಸೇವೆ ಮುಂದುವರೆಸಲು ಸೂಚಿಸಲಾಗಿತ್ತು. ಆದರೆ ಹೆಚ್ಚಿನ ದರಕ್ಕೆ ಹಿಂದೆ ಆಯ್ಕೆಯಾದ ಏಜೆನ್ಸಿಯನ್ನು ಅವಧಿ ಪೂರ್ಣಗೊಂಡಿದ್ದರೂ ಮುಂದುವರೆಸಲು ಸರ್ವ ಶಿಕ್ಷಣ ಅಭಿಯಾನದ ಆರ್ಥಿಕ ನಿಯಮಗಳಲ್ಲಿ ಅವಕಾಶವಿಲ್ಲ. ಈ ರೀತಿ ಮಾಡುವುದು ಶಿಕ್ಷಾರ್ಹ ಅಪರಾಧವಾಗುತ್ತದೆ. ಈ ಹಿನ್ನೆಲೆಯಲ್ಲಿ ನವೋದಯ ಎಜುಕೇಶನ್ ಟ್ರಸ್ಟ್ ಸಂಸ್ಥೆಯವರು ಜಿಲ್ಲಾ ಕಛೇರಿಗೆ ಮಾಡಿಕೊಂಡಿರುವ ಒಪ್ಪಂದದಲ್ಲಿ 'ಮುಂದಿನ ಆದೇಶವಾಗುವವರೆಗೆ ಒಪ್ಪಂದವು ಜಾರಿಯಲ್ಲಿರುತ್ತದೆ' ಎಂಬ ನಿಯಮವೂ ಇರುವುದರಿಂದ ಇವರ ಸೇವೆಯನ್ನು ರದ್ದುಗೊಳಿಸಿ, ಹೊಸದಾಗಿ ದರಪಟ್ಟಿ ಆಹ್ವಾನ ಮಾಡಿ, ಏಜೆನ್ಸಿಯನ್ನು ಆಯ್ಕೆ ಮಾಡಲು ಸೂಚಿಸಿದೆ. ಇದೇ ರೀತಿ ಇತರೆಡೆ ಇಲಾಖೆಯಿಂದ ನಿರ್ವಹಿಸಲ್ಪಡುವ ಕೆ.ಜಿ.ಬಿ.ವಿ.ಗಳು ಏಜೆನ್ಸಿಯನ್ನು ಆಯ್ಕೆ ಮಾಡಿರುವ ಬಗ್ಗೆ ದಿನಾಂಕ: 15-06-2010 ರೊಳಗೆ ಅನುಬಂಧ-1 ರಂತೆ ವರದಿ ಮಾಡುವುದು. ಈ ಬಗ್ಗೆ ಅಗತ್ಯ ಮೇಲ್ವಿಚಾರಣೆಯನ್ನು ಡಿ.ಡಿ.ಪಿ.ಐ.ಗಳು ಕೈಗೊಳ್ಳುವುದು. ನಿರ್ಲಕ್ಷ್ಯದ ಪ್ರಕರಣಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು.

ನಿರ್ದೇಶಕರು (ಕಾರ್ಯಕ್ರಮ)
ಸರ್ವ ಶಿಕ್ಷಣ ಅಭಿಯಾನ

**ಮುಂದಿನ ಕ್ರಮಕ್ಕಾಗಿ**

1. ಸಂಬಂಧಿಸಿದ ಡಿ.ಡಿ.ಪಿ.ಐ., ಡಿವೈಪಿಸಿ., ಬಿಇಒ, ಬಿಆರ್‌ಸಿ ಮತ್ತು ಕೆ.ಜಿ.ಬಿ.ವಿ. ಮುಖ್ಯ ಶಿಕ್ಷಕರಿಗೆ
2. ಈ ಕಛೇರಿಯ ನೋಡಲ್ ಅಧಿಕಾರಿಗಳಿಗೆ
3. ಮುಖ್ಯ ಲೆಕ್ಕಾಧಿಕಾರಿಗಳು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.

**ಅನುಪಾಲನೆಗಾಗಿ ಕಳುಹಿಸಿದೆ**

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ, ಧಾರವಾಡ.
2. ಸಂಬಂಧಿಸಿದ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿಗಳು, ಜಿಲ್ಲಾ ಪಂಚಾಯತ್
3. ಸರ್ಕಾರದಿಂದ ನೇಮಕವಾದ ಜಿಲ್ಲಾ ನೋಡಲ್ ಅಧಿಕಾರಿಗಳಿಗೆ

**ಇವರಿಗೆ ಮಾಹಿತಿಗೆ ಸಲ್ಲಿಸಿದೆ :**

1. ಮಾನ್ಯ ಪ್ರಧಾನ ಕಾರ್ಯದರ್ಶಿಯವರು, (ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ) ಬಹುಮಹಡಿ ಕಟ್ಟಡ, ಡಾ.. ಅಂಬೇಡ್ಕರ್ ರಸ್ತೆ, ಬೆಂಗಳೂರು.
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು.

## ಅನುಬಂಧ-1

1. **ಆಹಾರ ಪೂರೈಕೆಯ ಏಜೆನ್ಸಿಯನ್ನು ಆಯ್ಕೆ ಮಾಡಿದ ಕುರಿತ ವರದಿ:**

**ಜಿಲ್ಲೆ:**

| ಕ್ರ. ಸಂ | ಬ್ಲಾಕ್ | ಕೆ.ಜಿ.ಬಿ.ವಿ | ದರಪಟ್ಟಿ ಆಹ್ವಾನ ಮಾಡಿದ ದಿನಾಂಕ | ದರಪಟ್ಟಿ ಕುರಿತ ಜಾಹೀರಾತು ನೀಡಿದ ಪತ್ರಿಕೆ (ಪ್ರತಿ ಲಗತ್ತಿಸಿ) | ಎಲ್-1 ಆಗಿ ಆಯ್ಕೆಯಾಗಿರುವ ಏಜೆನ್ಸಿ | ಏಜೆನ್ಸಿ ನಮೂದಿಸಿರುವ ದರ (ಪ್ರತಿ ವಿದ್ಯಾರ್ಥಿನಿಗೆ ಪ್ರತಿ ದಿನಕ್ಕೆ) | ಕಾರ್ಯದೇಶ ನೀಡಿದ ದಿನಾಂಕ: ಕಾರ್ಯಾದೇಶ ನೀಡದಿದ್ದಲ್ಲಿ ಕಾರಣ | ಷರಾ |
|---|---|---|---|---|---|---|---|---|
| | | | | | | | | |
| | | | | | | | | |
| | | | | | | | | |
| | | | | | | | | |

2. **ಅರೆಕಾಲಿಕ ಸಿಬ್ಬಂದಿ ಸೇವೆಗೆ ಸಂಬಂಧಿಸಿದ ಏಜೆನ್ಸಿಯನ್ನು ಆಯ್ಕೆ ಮಾಡಿದ ಕುರಿತ ವರದಿ**

**ಜಿಲ್ಲೆ:**

| ಕ್ರ. ಸಂ | ಬ್ಲಾಕ್ | ಕೆ.ಜಿ.ಬಿ.ವಿ | ದರಪಟ್ಟಿ ಆಹ್ವಾನ ಮಾಡಿದ ದಿನಾಂಕ | ದರಪಟ್ಟಿ ಕುರಿತ ಜಾಹೀರಾತು ನೀಡಿದ ಪತ್ರಿಕೆ (ಪ್ರತಿ ಲಗತ್ತಿಸಿ) | ಎಲ್-1 ಆಗಿ ಆಯ್ಕೆಯಾಗಿರುವ ಏಜೆನ್ಸಿ | ಏಜೆನ್ಸಿ ನಮೂದಿಸಿರುವ ದರ | ಕಾರ್ಯದೇಶ ನೀಡಿದ ದಿನಾಂಕ: ಕಾರ್ಯಾದೇಶ ನೀಡದಿದ್ದಲ್ಲಿ ಕಾರಣ | ಷರಾ |
|---|---|---|---|---|---|---|---|---|
| | | | | | | | | |
| | | | | | | | | |
| | | | | | | | | |
| | | | | | | | | |